ಕರ್ನಾಟಕ ರಾಜ್ಯ ಪೊಲೀಸ್ KARNATAKA STATE POLICE

# ವಾರ್ತಾ ಪತ್ರಿಕೆ NEWS LETTER

ಜುಲೈ–2021 ★★ JULY - 2021



**ಶ್ರೀ ಪ್ರವೀಣ್ ಸೂದ್, ಐ.ಪಿ.ಎಸ್.**
ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು

## ಸಂದೇಶ

ಆತ್ಮೀಯ ಸಹೋದ್ಯೋಗಿಗಳೇ,

2020ನೇ ಇಸವಿಯು, ಕೋವಿಡ್–19ನ ಪರಿಸ್ಥಿತಿಯಿಂದಾಗಿ, ಅತ್ಯಂತ ಕ್ಲಿಷ್ಟಕರ ಸವಾಲುಗಳನ್ನು ನಮ್ಮ ಇಲಾಖೆಗೆ ಒಡ್ಡಿತ್ತು. ತದನಂತರ ಪರಿಸ್ಥಿತಿ ಹತೋಟಿಗೆ ಬಂದು, ನಾವೆಲ್ಲ ತುಸು ನಿರಾಳರಾಗಿ, ಇನ್ನು ಮುಂದೆ ನಮ್ಮ ದೈನಂದಿನ ಪೊಲೀಸ್ ಕರ್ತವ್ಯಗಳೆಡೆಗೆ ಗಮನಹರಿಸಬಹುದೆಂಬ ಆಶಾಭಾವನೆಯಲ್ಲಿದ್ದಾಗಲೇ, ಕೋವಿಡ್‌ನ 2 ನೇ ಅಲೆಯ ಸುನಾಮಿಯ ಹೊಡೆತ ನಮ್ಮನ್ನು ತತ್ತರಗೊಳಿಸಿತು.

ಕೋವಿಡ್ ಒಂದನೇ ಅಲೆಯಲ್ಲಿ ನಮ್ಮ ರಾಜ್ಯ ಹಾಗೂ ದೇಶದಲ್ಲಿ ಅತಿ ಹೆಚ್ಚು ಸಾವು–ನೋವುಗಳು ಉಂಟಾದಾಗ ಪೊಲೀಸ್ ಇಲಾಖೆಯಲ್ಲಿ ಸಹ 102 ಅಧಿಕಾರಿ/ ಸಿಬ್ಬಂದಿಗಳು ತಮ್ಮ ಅಮೂಲ್ಯ ಪ್ರಾಣ ಕಳೆದುಕೊಂಡಿದ್ದರು. ಅದೃಷ್ಟವಶಾತ್ ಕೋವಿಡ್‌ನ 2ನೇ ಅಲೆಗೂ ಮುಂಚೆ ಶೇ 99% ರಷ್ಟು ನಮ್ಮ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳು ವ್ಯಾಕ್ಸಿನೇಷನ್‌ಗೆ ಒಳಗಾದರು. ಈ ಮುಂಜಾಗ್ರತಾ ಕ್ರಮ ತೆಗೆದುಕೊಂಡರೂ ಸಹಾ ನಾವು ಕೋವಿಡ್ 2ನೇ ಅಲೆಯಲ್ಲಿ, 58 ಸಿಬ್ಬಂದಿ/ಅಧಿಕಾರಿಗಳನ್ನು ಕಳೆದುಕೊಂಡೆವು. ಕೋವಿಡ್–19 ನಿಂದ ಮೃತಪಟ್ಟ ಎಲ್ಲಾ ಸಿಬ್ಬಂದಿ/ಅಧಿಕಾರಿಗಳಿಗೂ ನಾವು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಕುಟುಂಬವರ್ಗಕ್ಕೆ, ಅವರ ನೋವಿಗೆ ಸ್ಪಂದಿಸುತ್ತಾ, ಅವರಿಗೆ ಎಲ್ಲಾ ರೀತಿಯ ನೆರವನ್ನು ನೀಡುತ್ತೇವೆ ಎಂಬ ಭರವಸೆಯನ್ನು ನೀಡುತ್ತಿದ್ದೇನೆ.

ಕಳೆದ 6 ತಿಂಗಳಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಅನೇಕ ಸವಾಲುಗಳ ನಡುವೆಯೂ, ಮಹತ್ತರ ಪ್ರಗತಿಯನ್ನು ಸಾಧಿಸಿದೆ ಎಂಬ ಅಂಶವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಹೆಮ್ಮೆ ಪಡುತ್ತೇನೆ. ಮೂಲಭೂತಸೌಕರ್ಯಗಳು, ಸಾರಿಗೆ ಮತ್ತು ಮಾನವ ಸಂಪನ್ಮೂಲಗಳಿಗೆ ಮಹತ್ವವಾದ ಸೇರ್ಪಡೆಗಳನ್ನು ಮಾಡಲಾಗಿದೆ. ಈ ಎಲ್ಲಾ ಬೆಳವಣಿಗೆಗಳನ್ನು ವಾರ್ತಾಪತ್ರಿಕೆಯಲ್ಲಿ ವಿಶದವಾಗಿ ತಿಳಿಸಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಗೃಹ ಮಂತ್ರಿಗಳು ಈ ನಿಟ್ಟಿನಲ್ಲಿ ನಮಗೆ ಎಲ್ಲಾ ರೀತಿಯ ಸಹಕಾರ ನೀಡಿದ್ದಾರೆ ಎಂಬುದನ್ನೂ ಸಹ ಸ್ಮರಿಸಿಕೊಳ್ಳುತ್ತೇನೆ. ಆದಾಗ್ಯೂ ನಮ್ಮ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಎಲ್ಲಾ ಘಟಕಾಧಿಕಾರಿಗಳ ಮೇಲಿದೆ.

ಸನ್ಮಾನ್ಯ ಕೇಂದ್ರ ಗೃಹಸಚಿವರಾದ, ಶ್ರೀಯುತ ಅಮಿತ್ ಶಾ ರವರಿಂದ ಉದ್ಘಾಟಿಸಲ್ಪಟ್ಟ "ನಮ್ಮ 112" ಯೋಜನೆಯಡಿ ERSS ವಾಹನಗಳ ಲೋಕಾರ್ಪಣೆಯು ಕಳೆದ 6 ತಿಂಗಳಿನ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಸೇರ್ಪಡೆಯಾಗಿದೆ. ನಾಗರಿಕರ ಮನೆಬಾಗಿಲಿಗೆ ಪೊಲೀಸ್ ಸೇವೆಯನ್ನು ತಲುಪಿಸುವ ನಿಟ್ಟಿನಲ್ಲಿ "ನೊಂದವರಿಗೆ ನೆರವು" ಎಂಬ ಆಶಯವನ್ನು ಸಾಕಾರಗೊಳಿಸುವಲ್ಲಿ ದಿಟ್ಟ ಹೆಜ್ಜೆಯಾಗಿದೆ.

## ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶ




ದಿನಾಂಕ 12–02–2021 ರಂದು ವಿಧಾನ ಸೌಧದ 3ನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದ ಉದ್ಘಾಟನೆಯನ್ನು ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿ ಈ ಕೆಳಕಂಡ ಅಂಶಗಳ ಸಂಬಂಧ ಘಟಕಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಿರುತ್ತಾರೆ. ಈ ಸಮಾವೇಶವು ದಿನಾಂಕ 13–02–2021 ರಂದು ಪೊಲೀಸ್ ಪ್ರಧಾನ ಕಛೇರಿಯ ಸಮ್ಮೇಳನ ಸಭಾಂಗಣದಲ್ಲಿ ಮುಕ್ತಾಯಗೊಂಡಿರುತ್ತದೆ.

(1) Security Challenges in Karnataka.
(2) KPID Act V/S BUDS.
(3) E-Beat and Lockdown House monitoring system.
(4) Dashboard And Analytics of the Crime Report in Police IT.
(5) Issues relating to Administrative /Housing / Welfare.
(6) Law & Order situation.
(7) e-lost software.
(8) Mobile CCTNS, E-sign integration with Police IT and ICJS.
(9) Issues relating to FSL & FEB.
(10) KTPP Act and Procurement process through GEM

ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬವರ್ಗದವರ ಕ್ಷೇಮಾಭಿವೃದ್ಧಿಯು ನನ್ನ ಪ್ರಮುಖ ಆದ್ಯತೆಯಾಗಿದೆ. ಕೋವಿಡ್–19 ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳಷ್ಟೇ ಅಲ್ಲದೆ ಅವರ ಕುಟುಂಬವರ್ಗದವರ ಬಗ್ಗೆ ಸಹಾ ಕಾಳಜಿ ವಹಿಸಲಾಗಿದೆ. ಇನ್ನು ಮುಂದೆ ನಾವು ಕೈಗೊಳ್ಳುವ ಎಲ್ಲಾ ಯೋಜನೆಗಳು ಕೇವಲ ನಾಗರಿಕ ಕೇಂದ್ರಿತವಾಗಿರದೆ, ಕಾನ್ಸ್‌ಟೇಬಲ್ ಕೇಂದ್ರಿತ ಕೂಡ ಆಗಿರುತ್ತದೆ ಎನ್ನುವ ಭರವಸೆಯನ್ನು ನಾನು ತಮಗೆಲ್ಲ ನೀಡಬಯಸುತ್ತೇನೆ.

**ಶುಭಾಶಯಗಳೊಂದಿಗೆ,**

ತಮ್ಮ ನಂಬುಗೆಯ,

(ಪ್ರವೀಣ್ ಸೂದ್)
ಡಿಜಿ ಮತ್ತು ಐಜಿಪಿ
ಕರ್ನಾಟಕ.

## ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಇತ್ತೀಚಿನ ಬೆಳವಣಿಗೆಗಳು

- ಪೊಲೀಸ್ ಗೃಹ-2025 ಯೋಜನೆಗೆ ಈಗಾಗಲೇ ಚಾಲನೆ ಕೊಟ್ಟಿದ್ದು, ರೂ. 300 ಕೋಟಿ ವೆಚ್ಚದ ಮೊದಲ ಹಂತದಲ್ಲಿ ಸುಮಾರು 1200 ವಸತಿ ಗೃಹಗಳನ್ನು ಕಟ್ಟಲು ಉದ್ದೇಶಿಸಲಾಗಿದೆ.
- 27 ಪೊಲೀಸ್ ಠಾಣೆಗಳ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸಲಾಗಿದೆ.
- ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ವೈಜ್ಞಾನಿಕ ಅಧಿಕಾರಿಗಳು ಮತ್ತು ಪಿಎಸ್ಐ ಹಾಗೂ ಸಿಪಿಸಿಗಳನ್ನು ನೇಮಕ ಮಾಡಲು ಈಗಾಗಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ.
- 139 ಪೊಲೀಸ್ ಠಾಣೆಗಳನ್ನು ಪಿ.ಐ. ಪೊಲೀಸ್ ಠಾಣೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.
- ಬಂದೋಬಸ್ತ್ ಸಮಯದಲ್ಲಿ ನೀಡಲಾಗುವ ಆಹಾರ ಭತ್ಯೆಯನ್ನು ದುಪ್ಪಟ್ಟುಗೊಳಿಸಲಾಗಿದೆ, ಅಂದರೆ, ರೂ.100 ರಿಂದ ರೂ.200 ಕ್ಕೆ ಏರಿಸಲಾಗಿದೆ.
- ಕಳೆದ 2 ವರ್ಷಗಳಲ್ಲಿ 2275 ಹಳೆಯ ವಾಹನಗಳನ್ನು ನಿರುಪಯುಕ್ತಗೊಳಿಸಲಾಗಿದೆ. ಹೊಸದಾಗಿ ಒಟ್ಟು 1809 ವಾಹನಗಳನ್ನು ಖರೀದಿಸಿ ಪೊಲೀಸ್ ಪಡೆಗೆ ಸೇರ್ಪಡೆಗೊಳಿಸಲಾಗಿದೆ. ಅವುಗಳಲ್ಲಿ 462-ನಾಲ್ಕು ಚಕ್ರ ವಾಹನ, 1287-ದ್ವಿಚಕ್ರ ವಾಹನಗಳು, 15-ಬಸ್, 26-ಟಿ.ಟಿ/ವ್ಯಾನ್/ಎಸ್ಎಮ್ಎಲ್, 04-ಓಪನ್ ಟ್ರಕ್, 10-ವಾಟರ್ ಟ್ಯಾಂಕರ್, 03-ಟ್ರ್ಯಾಕ್ಟರ್, 2-ಜೆಸಿಬಿ, ಸೇರಿವೆ.
- 2020-21ನೇ ಸಾಲಿನ ಆಯವ್ಯಯದಲ್ಲಿ ಆರೋಗ್ಯ ಭಾಗ್ಯ ಯೋಜನೆಯಡಿ ನಿಗದಿಯಾದ ಅನುದಾನ ರೂ 57 ಕೋಟಿಗೆ ಎದುರಾಗಿ, ಸರ್ಕಾರದಿಂದ ರೂ. 111 ಕೋಟಿ ಬಿಡುಗಡೆಯಾಗಿರುತ್ತದೆ. ಇದರಿಂದ ಎಲ್ಲಾ ಆಸ್ಪತ್ರೆಗಳ ಬಾಕಿಯನ್ನು ತೀರಿಸಲಾಗಿದೆ.
- 2020-21ನೇ ಸಾಲಿನ ಆಯವ್ಯಯದಲ್ಲಿ, ಪ್ರಯಾಣ ಭತ್ಯೆಗೆ ನಿಗದಿಯಾದ ಮೊತ್ತ ರೂ 78 ಕೋಟಿಗೆ ಎದುರಾಗಿ ರೂ. 137 ಕೋಟಿ ಸರ್ಕಾರದಿಂದ ಬಿಡುಗಡೆಯಾಗಿದ್ದು, ಎಲ್ಲಾ ಬಾಕಿ ಉಳಿದಿದ್ದ ಬಿಲ್ಲುಗಳ ಬಾಕಿಯನ್ನು ತೀರಿಸಲಾಗಿದೆ.
- ವೈದ್ಯಕೀಯ ವೆಚ್ಚ ಮರುಪಾವತಿಯಡಿಯಲ್ಲಿ ನಿಗದಿಪಡಿಸಿದ ಆಯವ್ಯಯದ ಮೊತ್ತ ರೂ. 9 ಕೋಟಿಗೆ ಎದುರಾಗಿ ಸರ್ಕಾರದಿಂದ ರೂ. 19 ಕೋಟಿ ಬಿಡುಗಡೆಯಾಗಿರುತ್ತದೆ. ಎಲ್ಲಾ ಬಾಕಿ ಉಳಿದಿದ್ದ ಬಿಲ್‌ಗಳನ್ನು ಪಾವತಿಸಲಾಗಿದೆ.
- 2090 ವಾಸಿಸಲು ಯೋಗ್ಯವಲ್ಲದ ವಸತಿಗೃಹಗಳು ಹಾಗೂ ಇನ್ನಿತರೆ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ ಹಾಗೂ ಪ್ರಸ್ತುತ 1773 ಕಟ್ಟಡಗಳನ್ನು ನೆಲಸಮಗೊಳಿಸುವ ಪ್ರಕ್ರಿಯೆ ಸಹ ಜಾರಿಯಲ್ಲಿರುತ್ತದೆ.
- ಪೊಲೀಸ್ ಗೃಹ-2020 ಯೋಜನೆಯು, ಆಗಸ್ಟ್ 2021 ರಲ್ಲಿ ಪೂರ್ಣಗೊಳ್ಳಲಿದ್ದು, ಇದರೊಂದಿಗೆ, 11000 ವಸತಿ ಗೃಹಗಳು ಪೊಲೀಸ್ ಪಡೆಗೆ ಸೇರ್ಪಡೆಯಾದಂತಾಗುತ್ತದೆ.
- ಪೊಲೀಸ್ ಕಾಲೋನಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಪ್ರಸ್ತುತ ರೂ. 15 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.
- 150 ಹೊಸ ವಾಹನಗಳನ್ನು ಖರೀದಿಸಿ "ನಮ್ಮ 112" ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆ.
- ಅತಿ ಶೀಘ್ರದಲ್ಲೇ, ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲೂ ಬೆರಳಚ್ಚು ಮುದ್ರಣಕ್ಕಾಗಿ, ಲೈವ್ ಸ್ಕ್ಯಾನರ್‌ಗಳನ್ನು ಒದಗಿಸಲಾಗುವುದು.
- ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಇವರ ಅಧಿಕೃತ ನಿವಾಸ ಕಟ್ಟುವ ಯೋಜನೆ ಸಹ ಇದೆ.
- ಶಿಗ್ಗಾಂವಿಯಲ್ಲಿರುವ ಪೊಲೀಸ್ ಪಬ್ಲಿಕ್ ಶಾಲೆಯನ್ನು ಮೇಲ್ದರ್ಜೆಗೇರಿಸುವ ಮತ್ತು ಕೆ.ಎಸ್.ಆರ್.ಪಿ. 10ನೇ ಪಡೆ ಶಿಗ್ಗಾಂವಿಯಲ್ಲಿ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.
- ಕೋವಿಡ್ ರೋಗದಿಂದ ಮೃತರಾದ ಅಧಿಕಾರಿ/ಸಿಬ್ಬಂದಿಗಳ ಪ್ರತಿ ಕುಟುಂಬಕ್ಕೆ ರೂ. 30 ಲಕ್ಷ ಗಳಂತೆ ಪರಿಹಾರವನ್ನು ನೀಡಲಾಗುತ್ತಿದೆ.
- 2020-21ನೇ ಸಾಲಿನಲ್ಲಿ, ಸಿ.ಓ.ಪಿ ಕಲ್ಬುರ್ಗಿ, ಸಿಟಿಪಿ ಬೆಳಗಾವಿ, ಕೆಎಸ್ಆರ್‌ಪಿ ತುಮಕೂರು ಪಡೆಯ 2ನೇ ಹಂತದ ಕಾಮಗಾರಿ, ತರಬೇತಿ ಶಾಲೆಗಳ ಮೂಲಭೂತ ಸೌಕರ್ಯ ಸೌಲಭ್ಯ ಹೆಚ್ಚಿಸಲು, ಕೆಎಸ್ಆರ್‌ಪಿ ಮುನಿರಾಬಾದ್‌ನಲ್ಲಿ ಸಮುದಾಯ ಭವನ ಕಟ್ಟಿಸಲು, ಕೋರಮಂಗಲದಲ್ಲಿ ಕಲ್ಯಾಣ ಮಂಟಪ, 3ನೇ ಪಡೆ ಕೆಎಸ್ಆರ್‌ಪಿ ಬೆಂಗಳೂರಿನಲ್ಲಿ ಸಮುದಾಯ ಭವನ ಹಾಗೂ ಸ್ಟೇಡಿಯಂ ಕಟ್ಟಲು ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ.
- ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳನ್ನು ಮುಂದಿನ ಮೂರು ವರ್ಷದ ಅವಧಿಗೆ ಅಂದರೆ, 2024-25ನೇ ಸಾಲಿನವರೆಗೂ ನೇಮಕ ಮಾಡಿಕೊಳ್ಳಲು ಈಗಾಗಲೇ ಸರ್ಕಾರದ ಆದೇಶ ಸ್ವೀಕೃತವಾಗಿದೆ.
- ದಾವಣಗೆರೆ, ಬಾಗಲಕೋಟೆ, ಮಂಡ್ಯ, ರಾಯಚೂರು, ಚಿತ್ರದುರ್ಗ, ಧಾರವಾಡ, ವಿಜಯಪುರ, ಬೀದರ್, ಹಾಸನ, ಹುಬ್ಬಳ್ಳಿ, ಹಾವೇರಿ, ಗದಗ, ಮತ್ತು ಕೆ.ಜಿ.ಎಫ್ ಜಿಲ್ಲೆಗಳಲ್ಲಿ ಶ್ವಾನದಳಕ್ಕೆ **(KENNELS)** ಶೆಡ್ ಕಟ್ಟುವ ಪ್ರಕ್ರಿಯೆ ಸದ್ಯದಲ್ಲೇ ಪ್ರಾರಂಬಿಸಲಾಗುವುದು.
- ಕೊಪ್ಪಳ, ವಿಜಯಪುರ, ಹಾವೇರಿ, ಕೆ.ಜಿ.ಎಫ್ ಮತ್ತು ಧಾರವಾಡದಲ್ಲಿ ಹೊಸ ಡಿ.ಎ.ಆರ್. ಕಟ್ಟಡ ಕಾಮಗಾರಿಯನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಾಗುವುದು.
- ಮೈಸೂರು, ಮಂಡ್ಯ, ಯಾದಗಿರಿ, ಹಾಸನ, ಬೀದರ್, ಸಿಎಆರ್ (ಉತ್ತರ), 3 ಮತ್ತು 4ನೇ ಪಡೆ, ಕೆ.ಎಸ್.ಆರ್.ಪಿ, ಕಂಗ್ರಾಳಿ ತರಬೇತಿ ಶಾಲೆ, ಹಾವೇರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶಸ್ತ್ರಾಗಾರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.
- ಈ ರೀತಿ ಮೇಲ್ಕಂಡ ಪೊಲೀಸ್ ಇಲಾಖೆಯ ವಿವಿಧ ಘಟಕಗಳಿಗೆ ಅವಶ್ಯವಿರುವ ಡಾಗ್ ಕೆನಲ್, ಡಿಎಆರ್ ಕಛೇರಿ ಕಟ್ಟಡ ಮತ್ತು ಆರ್ಮರಿ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಒಟ್ಟು ರೂ. 43.54 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಸರ್ಕಾರವು ಮಂಜೂರಾತಿ ನೀಡಲಾಗಿದೆ.
- ವಿಧಿ ವಿಜ್ಞಾನ ಕೇಂದ್ರ, ಸಿಓಪಿ, ಮೈಸೂರು, ಐಆರ್‌ಬಿ ವಿಜಯಪುರ ಮತ್ತು ಕೆ.ಎಸ್.ಆರ್.ಪಿ. ತುಮಕೂರು 1 ನೇ ಹಂತದ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.
- ಕೊಡಗು ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹೊಸ ಡಿ.ಪಿ.ಓ ಕಟ್ಟಡ ಕಾಮಗಾರಿಗಳು ತಲಾ ರೂ. 990 ಲಕ್ಷಗಳಲ್ಲಿ ಶೀಘ್ರದಲ್ಲೇ ಪ್ರಾರಂಭಗೊಳ್ಳಲಿವೆ.
- ಪೊಲೀಸ್ ಕಾನ್ಸ್‌ಟೇಬಲ್‌ಗಳಿಂದ ಹಿಡಿದು ಡಿ.ವೈ.ಎಸ್.ಪಿ.ಯವರೆಗೆ ಎಲ್ಲಾ ಹಂತಗಳಲ್ಲೂ ಇಲ್ಲಿಯವರೆಗೂ ಪದೋನ್ನತಿ ನೀಡಲಾಗಿದೆ.
- ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

ನಕ್ಸಲ್ ನಿಗ್ರಹ ಪಡೆಯಲ್ಲಿ ಸ್ಥಾಯಿ ಆದೇಶ 1008 ರ ರೀತ್ಯಾ ವಿವಿಧ ಜಿಲ್ಲೆಯ ನಕ್ಸಲ್ ನಿಗ್ರಹ ಪಡೆಯ ಕರ್ತವ್ಯಕ್ಕೆ ನಿಯೋಜನೆ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಈ ಕೆಳಕಂಡ ಹಣಕಾಸಿನ ಸೌಲಭ್ಯಗಳನ್ನು ನೀಡಲಾಗಿದೆ.

| | |
|---|---|
| ವಿಶೇಷ ವೇತನ ಭತ್ಯೆ | ಪಿಐ - ರೂ. 6000<br>ಪಿಎಸ್ಐ - ರೂ. 5000<br>ಎಎಸ್ಐ ಇಂದ ಪಿಸಿವರೆಗೆ - ರೂ. 4000<br>ಫಾಲೋಯರ್ - ರೂ. 3000 |
| ಆಹಾರ ಭತ್ಯೆ | ರೂ. 130 ಪ್ರತಿ ದಿನ |
| ತಿಂಗಳ ವಿಶ್ರಾಂತಿ | 23 ದಿನಗಳು ಸತತವಾಗಿ ಕರ್ತವ್ಯನಿರ್ವಹಿಸಿದ ಅಧಿಕಾರಿ/ ಸಿಬ್ಬಂದಿಗಳಿಗೆ ಅವರ ಮನೆಗೆ (ಸ್ವಗ್ರಾಮ) ಹೋಗಿಬರಲು 7 ದಿನಗಳ ವಿಶ್ರಾಂತಿಯನ್ನು ನೀಡಲಾಗುತ್ತಿದೆ. |

## 150 ತುರ್ತು ಸ್ಪಂದನ ವಾಹನಗಳಿಗೆ ಶ್ರೀ ಅಮಿತ್ ಶಾ, ಸನ್ಮಾನ್ಯ ಕೇಂದ್ರ ಗೃಹ ಸಚಿವರಿಂದ ಚಾಲನೆ







ತುರ್ತು ಸ್ಪಂದನ ಸಹಾಯ ವ್ಯವಸ್ಥೆ (ಇಆರ್‌ಎಸ್‌ಎಸ್)ಯು ಭಾರತದಾದ್ಯಂತ ಒಂದೇ ತುರ್ತು ಸಂಖ್ಯೆ 112 ಅನ್ನು ಹೊಂದಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 550 ತುರ್ತು ಸ್ಪಂದನ ವಾಹನಗಳು ಕಾರ್ಯ ನಿರ್ವಹಿಸುತ್ತಿವೆ, ಇವುಗಳ ಜೊತೆಗೆ ಇನ್ನೂ ಹೆಚ್ಚುವರಿ 150 ತುರ್ತು ಸ್ಪಂದನ ವಾಹನಗಳಿಗೆ ದಿನಾಂಕ 16-01-2021 ರಂದು ವಿಧಾನ ಸೌಧದ ಬೃಹತ್ ಮೆಟ್ಟಲು ಬಳಿ ನಡೆದ ಸಮಾರಂಭದಲ್ಲಿ ಶ್ರೀ ಅಮಿತ್ ಶಾ, ಸನ್ಮಾನ್ಯ ಗೃಹ ಸಚಿವರು, ಭಾರತ ಸರ್ಕಾರ ರವರು ತಮ್ಮ ಅಮೃತ ಹಸ್ತದಿಂದ ಚಾಲನೆ ನೀಡಿರುತ್ತಾರೆ. ಪ್ರಸ್ತುತ 972 ತುರ್ತು ಸ್ಪಂದನ ವಾಹನಗಳು ರಾಜ್ಯದ ಸಾರ್ವಜನಿಕರ ರಕ್ಷಣೆಯ ಸೇವೆಯಲ್ಲಿ ತೊಡಗಿವೆ.

ಈ ಸಂದರ್ಭದಲ್ಲಿ ಶ್ರೀ ಬಿ.ಎಸ್ ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಕೇಂದ್ರ ಸಚಿವರು ಮತ್ತು ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಾಜಭವನದ ಗಾಜಿನ ಮನೆಯಲ್ಲಿ ನಡೆದ 2018-19ನೇ ಸಾಲಿನ ಮಾನ್ಯ ರಾಷ್ಟ್ರಪತಿಯವರ ಪದಕ ಪ್ರದಾನ ಸಮಾರಂಭ






ದಿನಾಂಕ 07-01-2021 ರಂದು ರಾಜಭವನದ ಗಾಜಿನ ಮನೆಯಲ್ಲಿ ನಡೆದ 2018-19ನೇ ಸಾಲಿನ ಮಾನ್ಯ ರಾಷ್ಟ್ರಪತಿಯವರ ಪದಕ ಪ್ರದಾನ ಸಮಾರಂಭದಲ್ಲಿ ಪೊಲೀಸ್ ಶ್ಲಾಘನೀಯ ಸೇವಾ ಪದಕ ಹಾಗೂ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ವಿಜೇತ 78 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಶ್ರೀ ವಜುಭಾಯಿ ರೂಡಾಭಾಯಿ ವಾಲ, ಗೌರವಾನ್ವಿತ ರಾಜ್ಯಪಾಲರು, ಶ್ರೀ ಬಿ.ಎಸ್ ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಅನೇಕ ಹಿರಿಯ ಅಧಿಕಾರಿಗಳು ಹಾಗೂ ಪದಕ ವಿಜೇತರ ಕುಟುಂಬ ಸದಸ್ಯರು ಹಾಜರಿದ್ದರು.

## 2019ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ಪುರಸ್ಕೃತರು



ದಿನಾಂಕ 08-02-2021 ರಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ 2019ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭದಲ್ಲಿ ಶ್ರೀ ಬಿ.ಎಸ್ ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಶ್ರೀ ಪಿ. ರವಿಕುಮಾರ್, ಐಎಎಸ್, ಮುಖ್ಯ ಕಾರ್ಯದರ್ಶಿಗಳು, ಡಾ॥ ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರವೀಣ್ ಸೂದ್, ಐಪಿಎಸ್, ಡಿಜಿ ಮತ್ತು ಐಜಿಪಿ, ಕರ್ನಾಟಕ ರಾಜ್ಯ ರವರುಗಳು ಆಗಮಿಸಿ 120 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ನೀಡಿ ಗೌರವಿಸಿರುತ್ತಾರೆ. ಈ ಸಂದರ್ಭದಲ್ಲಿ ಇಲಾಖೆಯ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

## ಪೊಲೀಸ್ ಧ್ವಜ ದಿನಾಚರಣೆ: ಮಾನ್ಯ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ



ಪ್ರತಿ ವರ್ಷದಂತೆ ದಿನಾಂಕ 02.04.2021 ರಂದು ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆಯನ್ನು ಆಚರಿಸಲಾಯಿತು. ಈ ಪೊಲೀಸ್ ಧ್ವಜ ದಿನಾಚರಣೆಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಎಸ್ ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಡಾ॥ ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರವೀಣ್ ಸೂದ್, ಐಪಿಎಸ್, ಡಿಜಿ ಮತ್ತು ಐಜಿಪಿ, ರವರುಗಳು ಆಗಮಿಸಿ 2020ನೇ ಸಾಲಿನ 133 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ಪ್ರದಾನ ಮಾಡಿರುತ್ತಾರೆ.

## 2020ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ಪುರಸ್ಕೃತರು



## ಶಿಗ್ಗಾಂವಿ ಪೊಲೀಸ್ ಪಬ್ಲಿಕ್ ಶಾಲೆಗೆ ಕೊಡುಗೆ



ಹಾವೇರಿ ಜಿಲ್ಲೆಯ ಶಿಗ್ಗಾಂವಿಯ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಕೌಶಾಲ್ಯಾಭಿವೃದ್ಧಿಗಾಗಿ ಟಯೋಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್, ಟಾಟಾ ಹಿಟಾಚಿ ಮತ್ತು ವೋಲ್ವೋ ಇಂಡಿಯಾ ಕಂಪನಿಗಳು ಸಿ.ಎಸ್.ಆರ್. ಚಟುವಟಿಕೆಯಡಿಯಲ್ಲಿ ಸುಮಾರು 29 ಲಕ್ಷ ಮೌಲ್ಯದ ಕಂಪ್ಯೂಟರ್ ಉಪಕರಣಗಳು, ಮರದ ಟೇಬಲ್, ಸ್ಟೀಲ್ ಟೇಬಲ್, ಪೀಕಾಕ್ ಚೇರ್, ಎಕ್ಸಿಕ್ಯೂಟೀವ್ ಚೇರ್, ಮಕ್ಕಳ ವಿವಿಧ ಆಟಿಕೆ ಸಾಮಗ್ರಿಗಳು ಹಾಗೂ ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯಗಳನ್ನು ನವೀಕರಣ ಹಾಗೂ ಇನ್ನಿತರ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಸದರಿಯವರ ಈ ಗಣನೀಯ ಸೇವೆಯನ್ನು ಕರ್ನಾಟಕ ರಾಜ್ಯದ ಪೊಲೀಸ್ ಪಡೆಯ ಮುಖ್ಯಸ್ಥರಾದ ಶ್ರೀ ಪ್ರವೀಣ್ ಸೂದ್, ಐಪಿಎಸ್, ಡಿಜಿ ಮತ್ತು ಐಜಿಪಿ ರವರು ತುಂಬು ಹೃದಯದಿಂದ ಶ್ಲಾಘಿಸಿರುತ್ತಾರೆ.

## ಶಿವಮೊಗ್ಗ ಪೊಲೀಸ್ ಪಬ್ಲಿಕ್ ಶಾಲೆಗೆ ಕೊಡುಗೆ



ಶಿವಮೊಗ್ಗ ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಕೌಶಾಲ್ಯಾಭಿವೃದ್ಧಿಗಾಗಿ ಟಾಟಾ ಹಿಟಾಚಿ ಮತ್ತು ರೋಟರಿ ಕಂಪನಿಗಳು ಸಿ.ಎಸ್.ಆರ್. ಚಟುವಟಿಕೆಯಡಿಯಲ್ಲಿ ಸುಮಾರು 25 ಲಕ್ಷ ಮೌಲ್ಯದ ಟೇಬಲ್‌ಗಳು, ಚೇರ್‌ಗಳು, ನಾಮಫಲಕ, ಮಕ್ಕಳ ವಿವಿಧ ಆಟಿಕೆ ಸಾಮಗ್ರಿಗಳು ಒಳಾಂಗಣ ಮತ್ತು ಹೊರಾಂಗಣದ ಕ್ರೀಡಾ ಸಾಮಗ್ರಿಗಳು, ಕಂಪ್ಯೂಟರ್ ಉಪಕರಣಗಳು, ಫ್ಯಾನ್‌ಗಳು, ಕಂಪ್ಯೂಟರ್ ಲ್ಯಾಬ್‌ನ ಬಳಕೆಗಾಗಿ ಯುಪಿಎಸ್ ಬ್ಯಾಟರಿ, ಹಾಗೂ ಇನ್ನಿತರ ಸಾಮಗ್ರಿಗಳನ್ನ ಕೊಡುಗೆಯಾಗಿ ನೀಡಿರುತ್ತಾರೆ.

ಸದರಿಯವರ ಈ ಗಣನೀಯ ಸೇವೆಯನ್ನು ಕರ್ನಾಟಕ ರಾಜ್ಯದ ಪೊಲೀಸ್ ಪಡೆಯ ಮುಖ್ಯಸ್ಥರಾದ ಶ್ರೀ ಪ್ರವೀಣ್ ಸೂದ್, ಐಪಿಎಸ್, ಡಿಜಿ ಮತ್ತು ಐಜಿಪಿ ರವರು ತುಂಬು ಹೃದಯದಿಂದ ಶ್ಲಾಘಿಸಿರುತ್ತಾರೆ.

## " ಪೊಲೀಸ್ ಗೃಹ-2025" ಯೋಜನೆಗೆ ಚಾಲನೆ ಮತ್ತು ಬಹುಮಹಡಿ ಪೊಲೀಸ್ ವಸತಿ ಗೃಹಗಳ ಉದ್ಘಾಟನೆ :





ಪೊಲೀಸ್ ಗೃಹ-2020ರ ಯೋಜನೆಯಡಿ 2015ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ರೂ. 2272.37 ಕೋಟಿ ವೆಚ್ಚದಲ್ಲಿ 11,000 ಪೊಲೀಸ್ ವಸತಿ ಗೃಹಗಳನ್ನು ಈಗಾಗಲೇ ನಿರ್ಮಿಸಲಾಗಿದೆ.

ಪೊಲೀಸ್ ಗೃಹ-2025 ಯೋಜನೆಯಡಿಯಲ್ಲಿ ಇಲಾಖೆಯು ರೂ.2740 ಕೋಟಿ ವೆಚ್ಚದಲ್ಲಿ 10034 ಪೊಲೀಸ್ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಿದೆ. ಕರ್ನಾಟಕ ಪೊಲೀಸರಿಗೆ ಒತ್ತಡರಹಿತ ಹಾಗೂ ಸುಭದ್ರ ನೆಲೆಯನ್ನು ಒದಗಿಸುವುದು ಇದರ ಮುಖ್ಯ ಗುರಿಯಾಗಿರುತ್ತದೆ.

| ಉದ್ಘಾಟನೆಯಾಗಿರುವ ಪೊಲೀಸ್ ವಸತಿ ಗೃಹಗಳ ವಿವರ | | |
|---|---|---|
| 1 | ಆಡುಗೋಡಿ | 384 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |
| 2 | ಸಿರ್ಸಿ ವೃತ್ತ | 192 (128 ಪಿಎಸ್‌ಐ, 64 ಹೆಚ್‌ಸಿ ಮತ್ತು ಪಿಸಿ) ವಸತಿ ಗೃಹಗಳು |
| 3 | ಕೋಲ್ಸ್ ರಸ್ತೆ | 32 ಪಿಎಸ್‌ಐ ವಸತಿ ಗೃಹಗಳು |
| 4 | ನಾಗರಭಾವಿ | 256 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |
| 5 | ಬಿನ್ನಿಮಿಲ್, ಟ್ಯಾಂಕ್ ಬಂಡ್ ರಸ್ತೆ | 64 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |
| 6 | ಸಂಪಿಗೆಹಳ್ಳಿ | 128 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |
| 7 | ವೈಟ್‌ಫೀಲ್ಡ್, ಕಾಡುಗೋಡಿ | 64 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |
| 8 | ಕೆ.ಆರ್. ಪುರಂ | 112 ಹೆಚ್‌ಸಿ ಮತ್ತು ಪಿಸಿ ವಸತಿ ಗೃಹಗಳು |

## ಸಿಬಿ ಶಾಖೆ

ದಿನಾಂಕ 31/01/2021 ರಿಂದ ದಿನಾಂಕ: 31/05/2021 ರವರೆಗೆ ಗ್ರೂಪ್-ಎ ಮತ್ತು ಗ್ರೂಪ್ ಬಿ ವೃಂದದ ವಿವಿಧ ದರ್ಜೆಯ ಅಧಿಕಾರಿಗಳಿಗೆ ಮುಂಬಡ್ತಿ ನೀಡಲಾದ ವಿವರ.

| | ಗ್ರೂಪ್-ಎ | |
|---|---|---|
| 1. | ಪೊಲೀಸ್ ಅಧೀಕ್ಷಕರು (ಸಿವಿಲ್) | 17 |
| 2. | ಡಿವೈಎಸ್‌ಪಿ (ಸಿವಿಲ್) | 42 |
| 3. | ಆಡಳಿತಾಧಿಕಾರಿ | 04 |
| 4. | ಸಹಾಯಕ ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, | 03 |
| | ಗ್ರೂಪ್-ಬಿ | |
| 5. | ಪಿ.ಐ (ಸಿವಿಲ್) (ಕೆಸಿಎಸ್‌ಆರ್ ನಿಯಮ 42 ರಡಿಯಲ್ಲಿ ಮುಂಬಡ್ತಿ) | 40 |
| 6. | ಸಹಾಯಕ ಆಡಳಿತಾಧಿಕಾರಿ | 07 |
| 7. | ಆರ್‌ಪಿಐ ಕೆಎಸ್‌ಆರ್‌ಪಿ | 32 |
| 8. | ಪಿಐ, (ಎಫ್‌ಪಿಬಿ) | 01 |
| 9. | ಆರ್‌ಪಿಐ (ಸಶಸ್ತ್ರ) | 01 |

ನ್ಯಾಯ ವಿಜ್ಞಾನ ಪ್ರಯೋಗಾಲಯಗಳಲ್ಲಿ ಖಾಲಿ ಇದ್ದ 22 ವಿವಿಧ ವಿಭಾಗಗಳಿಗೆ ವೈಜ್ಞಾನಿಕ ಅಧಿಕಾರಿಗಳಿಗೆ ದಿನಾಂಕ: 14/06/2021 ರಂದು ನೇಮಕಾತಿ ಆದೇಶವನ್ನು ಡಿಜಿ ಮತ್ತು ಐಜಿಪಿ ರವರು ಹೊರಡಿಸಿರುತ್ತಾರೆ.

## ಕಲ್ಯಾಣ ಶಾಖೆ

ಪ್ರಧಾನ ಕಛೇರಿಯ ದಿನಾಂಕ: 07/06/2021 ರ ಸುತ್ತೋಲೆಯಲ್ಲಿ ಪೊಲೀಸ್ ಅಧಿಕಾರಿ ಸಿಬ್ಬಂದಿಗಳು ಮರಣ ಹೊಂದಿದ ಸಂಧರ್ಭದಲ್ಲಿ ಅವರ ಕುಟುಂಬದವರಿಗೆ ಪಾವತಿಸಬೇಕಾದ ಹಣಕಾಸಿನ ಸೌಲಭ್ಯಗಳ ಬಗ್ಗೆ ವಿವರವಾಗಿ ಎಲ್ಲಾ ಘಟಕಾಧಿಕಾರಿಗಳಿಗೆ ಈ ಕೆಳಗಿನಂತೆ ಸೂಚನೆ ನೀಡಲಾಗಿದೆ.

| Sl.No | Scheme | Amount |
|---|---|---|
| 1. | Cremation Charges (BF). | Rs.10,000/- |
| 2. | Cremation Charges (Additional). | Rs.15,000/- |
| 3. | EGIS (Saving and Insurance Fund). | Rs.1,20,000/-D<br>Rs.2,40,000/-C<br>Rs.3,60,000/-B<br>Rs.4,80,000/-A |
| 4. | Leave Encashment | Upto 300 Days |
| 5. | Personal Savings and Insurances | KGID, GPF, LIC, PLI, etc, |
| 6. | Ex-gratia for death during Law & Order and Crime detection. | Rs.30,00,000/- |
| 7. | Special Group Insurance for Unnatural (Except Suicide) death while on duty. | Rs.20,00,000/- |
| 8. | SBI, Police Salary Package" Accidental Terrorist Naxalite Action. | Rs.30,00,000/- |
| 9. | ABI –Air Accident Insurance. | Rs.1,00,00,000/- |
| 10. | Axis Bank-Additional PA sum for death due to terrorism activities. | Rs.10,00,000/- |
| 11. | Axis Bank –Air Accident Coverage. | Rs.1,00,00,000/- |
| 12. | Ex-gratia for Covid -19, death. | Rs.30,00,000/- |

## ರಾಜ್ಯ ಸಿಬ್ಬಂದಿ ಶಾಖೆ

ಸರ್ಕಾರದ ಅಧಿಸೂಚನೆ ದಿನಾಂಕ: 09/04/2021 ರಲ್ಲಿ ಕರ್ನಾಟಕ ಸಿವಿಲ್ ಸೇವಾ
(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಕ್ಕೆ ಈ ಕೆಳಕಂಡಂತೆ ತಿದ್ದುಪಡಿಯನ್ನು ತರಲಾಗಿರುತ್ತದೆ.

| ಈ ಹಿಂದೆ ನಿಗದಿಪಡಿಸಿದ್ದ ನಿಯಮಗಳು | ಪ್ರಸ್ತುತ ತಿದ್ದುಪಡಿ ಆದೇಶದ ನಿಯಮಗಳು |
|---|---|
| ಸರ್ಕಾರಿ ನೌಕರ/ ನೌಕರಳು ಮೃತರಾಗಿದ್ದಲ್ಲಿ, ಆ ವ್ಯಕ್ತಿಯ ಮೇಲೆ ಅವಲಂಬಿತರಾಗಿದ್ದ ಅವರ ಮಗ ಅಥವಾ ಅವಿವಾಹಿತ ಮಗಳಿಗೆ ಮಾತ್ರ ಅನುಕಂಪದ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿತ್ತು. | ಪ್ರಸ್ತುತ ಸರ್ಕಾರಿ ನೌಕರ/ ನೌಕರಳು ಮೃತರಾಗಿದ್ದಲ್ಲಿ ಆ ವ್ಯಕ್ತಿಯ ಮೇಲೆ ಅವಲಂಬಿತರಾಗಿದ್ದ ಅವಿವಾಹಿತ / ವಿವಾಹಿತ / ವಿಚ್ಛೇದಿತ / ವಿಧವೆ ಮಗಳಿಗೂ ಅನುಕಂಪದ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. |
| ಸರ್ಕಾರಿ ನೌಕರ/ ನೌಕರಳು ಮೃತರಾಗಿದ್ದಲ್ಲಿ, ಅವರಿಗೆ ಅಪ್ರಾಪ್ತ ವಯಸ್ಸಿನ ಮಕ್ಕಳಿದ್ದಾಗ, ಆ ಮಕ್ಕಳು ಸರ್ಕಾರಿ ನೌಕರ/ ನೌಕರಳು ಮರಣ ಹೊಂದಿದ ಒಂದು ವರ್ಷದೊಳಗಾಗಿ ಪ್ರಾಪ್ತ ವಯಸ್ಕರಾದ ಪಕ್ಷದಲ್ಲಿ (ಹದಿನೆಂಟು ವರ್ಷಗಳನ್ನು ಪೂರೈಸಿದರೆ), ನಂತರ ಒಂದು ವರ್ಷಗಳ ಒಳಗೆ ಅರ್ಜಿಯನ್ನು ಸಲ್ಲಿಸಿ, ಅನುಕಂಪದ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿತ್ತು. | **ಸರ್ಕಾರಿ ನೌಕರ/ ನೌಕರಳು ಮರಣ ಹೊಂದಿದ ದಿನದಿಂದ :-**<br>* ಮೃತ ಸರ್ಕಾರಿ ನೌಕರ/ ನೌಕರಳಿಗೆ ಅಪ್ರಾಪ್ತ ಮಕ್ಕಳಿದ್ದಲ್ಲಿ, ಅವರು ಎರಡು ವರ್ಷಗೊಳಗಾಗಿ 18 ವಯಸ್ಸು ಪೂರೈಸಬೇಕು ಮತ್ತು ಅವರಿಗೆ ಎರಡು ವರ್ಷಗೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>* ಒಂದು ವೇಳೆ ತಂದೆ ತಾಯಿ ಇಬ್ಬರೂ ಮರಣ ಹೊಂದಿದ ಸಂದರ್ಭದಲ್ಲಿ ಹಾಗೂ ಅಪ್ರಾಪ್ತ ವಯಸ್ಸಿನ ಮಕ್ಕಳು ಇದ್ದ ಪಕ್ಷದಲ್ಲಿ, ಅಪ್ರಾಪ್ತ ವಯಸ್ಸಿನ ಮಕ್ಕಳೊಂದಿಗೆ ವಾಸವಿರುವ ಮತ್ತು ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರಿಗೂ (Guardian) ಸಹ ಅನುಕಂಪದ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. |

ವಾರ್ತಾ ಪತ್ರಿಕೆ
ಜುಲೈ-2021 ★★ JULY - 2021 NEWSLETTER

## ಅಪರಾಧ ಶಾಖೆ

ಪ್ರಧಾನ ಕಛೇರಿಯ ದಿನಾಂಕ: 20/03/2021 ರ ಸುತ್ತೋಲೆಯಲ್ಲಿ ಅಪರಾಧ ಪ್ರಕರಣಗಳಲ್ಲಿ ಮೊಬೈಲ್‌ಫೋನ್, ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಇ-ಮೇಲ್‌ಗಳಲ್ಲಿನ ಸಾಕ್ಷ್ಯವನ್ನು ಸಂಗ್ರಹಿಸಿದಾಗ/ವಶಪಡಿಸಿಕೊಂಡಾಗ / ಜಪ್ತಿ ಮಾಡಿಕೊಂಡಾಗ, ಅವುಗಳನ್ನು ಸಂರಕ್ಷಿಸಿಡುವ ಸಲುವಾಗಿ, ತನಿಖಾಧಿಕಾರಿಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ.

Non-Cognizable ಪ್ರಕರಣಗಳ ತನಿಖೆಗಳಲ್ಲಿ ಅಪರಾಧಿಗಳನ್ನು ಬಂಧಿಸುವ ಸಮಯದಲ್ಲಿ ಪಾಲಿಸಬೇಕಾದ ನಿಯಮಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದ್ದು, ಎಲ್ಲಾ ಘಟಕಾಧಿಕಾರಿಗಳು ಇವುಗಳನ್ನು ತಪ್ಪದೇ ಪಾಲಿಸಲು ಪ್ರಧಾನ ಕಛೇರಿಯ ದಿನಾಂಕ: 30/03/2021ರ ಸುತ್ತೋಲೆಯಲ್ಲಿ ಸೂಚಿಸಿದೆ.

## ಸಿಸಿಬಿ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ

ಕರ್ನಾಟಕ ಪೊಲೀಸ್ ಕಾಯ್ದೆ 1963 ಮತ್ತು ಜೊತೆಗೆ ಕಲಂ 36 ಸಿಪಿಸಿ 1973 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ, ಬೆಂಗಳೂರು ನಗರ ಅಪರಾಧ ದಳ (ಸಿಸಿಬಿ), ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಪೊಲೀಸ್ ಆಯುಕ್ತರ ಘಟಕಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಅವರಿಗಿಂತ ಮೇಲಿನ ಅಧಿಕಾರಿಗಳು ಬೆಂಗಳೂರು ನಗರ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ, ಪೊಲೀಸ್ ಆಯುಕ್ತರ ಘಟಕಗಳಲ್ಲಿನ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಂತೆ ಅಧಿಕಾರ ಚಲಾಯಿಸುವ ಉದ್ದೇಶಕ್ಕಾಗಿ, ಹಿರಿಯ ಪೊಲೀಸ್ ಅಧಿಕಾರಿಗಳೆಂದು ಸರ್ಕಾರದ ಆದೇಶ ಹೆಚ್‌ಡಿ 709, ಪಿಓಪಿ 2021 ದಿನಾಂಕ 10.06.2021 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

## ಆರೋಗ್ಯ ಭಾಗ್ಯ

ಸರ್ಕಾರದ ಪತ್ರ ಸಂಖ್ಯೆ: 01/04/2021 ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಪೊಲೀಸ್ ಅಧಿಕಾರಿ /ಸಿಬ್ಬಂದಿ ಹಾಗೂ ಅವರುಗಳ ಅವಲಂಬಿತ ಕುಟುಂಬದವರು ಆರೋಗ್ಯ ಭಾಗ್ಯ ಯೋಜನೆಯಡಿ ತೃತೀಯ ಹಂತದ ಕಾಯಿಲೆಗೆ ಚಿಕಿತ್ಸೆ ನೀಡುವ ಸಂಬಂಧ ನೆರೆ ರಾಜ್ಯದ ಹೈದರಾಬಾದ್‌ನ ಆಸ್ಪತ್ರೆಗಳಾದ 1. ಕಾಮಿನೇನಿ ಆಸ್ಪತ್ರೆ, ಕಿಂಗ್ ರಸ್ತೆ, 2. ಪೇಸ್ ಆಸ್ಪತ್ರೆ, ಹೈ-ಟೆಕ್ ಸಿಟಿ, 3. ಜರ್ಮನ್‌ಟೆನ್ ಆಸ್ಪತ್ರೆ, ಅತ್ತಾಪೂರ, ರಾಜೇಂದ್ರ ನಗರ ಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಮಂಜೂರಾತಿ ನೀಡಿದ್ದು, ಈ ಮಾಹಿತಿಯನ್ನು ಎಲ್ಲಾ ಘಟಕಾಧಿಕಾರಿಗಳಿಗೆ ಪ್ರಧಾನ ಕಛೇರಿ ಸುತ್ತೋಲೆ ದಿನಾಂಕ: 26/05/2021 ರಲ್ಲಿ ತಿಳಿಸಲಾಗಿದೆ.

### ಭದ್ರಾವತಿಯಲ್ಲಿ ನೂತನ ಆರ್.ಎ.ಎಫ್. ಬೆಟಾಲಿಯನ್ ಸ್ಥಾಪನೆ :



ಭದ್ರಾವತಿಯಲ್ಲಿ 50.29 ಎಕರೆ ಪ್ರದೇಶದಲ್ಲಿ ನೂತನವಾಗಿ ಸ್ಥಾಪಿಸಲಾಗುತ್ತಿರುವ ಕ್ಷಿಪ್ರ ಕಾರ್ಯಾಚರಣೆ ಪಡೆ (ಆರ್‌ಎಎಫ್) ಗೆ ದಿನಾಂಕ 16.01.2021 ರಂದು ಕೇಂದ್ರ ಗೃಹ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ ರವರು ತಮ್ಮ ಅಮೃತ ಹಸ್ತದಿಂದ ಚಾಲನೆ ನೀಡಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಮೊದಲಬಾರಿಗೆ ದೇಶದ ಅರೆಸೇನಾ ಪಡೆಗಳಲ್ಲಿ ಒಂದಾದ ಈ ಕ್ಷಿಪ್ರ ಕಾರ್ಯಾಚರಣೆ ಪಡೆಯ ಬೆಟಾಲಿಯನ್ ಅನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುತ್ತದೆ. ಇದರಿಂದ ಕರ್ನಾಟಕವೂ ಸೇರಿದಂತೆ ದಕ್ಷಿಣ ರಾಜ್ಯಗಳ ಕಾನೂನು ಸುವ್ಯವಸ್ಥೆ ಕಾಪಾಡಲು ಅನುಕೂಲವಾಗಲಿದೆ.

## ನೇಮಕಾತಿ

### ಪೊಲೀಸ್ ಸಬ್-ಇನ್ಸ್‌ಪೆಕ್ಟರ್ / ವೈಜ್ಞಾನಿಕ ಅಧಿಕಾರಿ

- ಪಿಎಸ್‌ಐ (ಸಿವಿಲ್)-300 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಘಟಕವಾರು ಭಾಗಶ: ಅಂತಿಮ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಿ, ಸಂಬಂಧಪಟ್ಟ ಘಟಕಗಳಿಗೆ ರವಾನಿಸಲಾಗಿರುತ್ತದೆ.
- ಆರ್‌ಎಸ್‌ಐ (ಸಿಎಆರ್/ಡಿಎಆರ್)-40 ಹುದ್ದೆಗಳಿಗೆ ಘಟಕವಾರು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಹಾಗೂ ದಾಖಲೆಗಳ ಪರಿಶೀಲನೆಯ ಸಲುವಾಗಿ ಸಂಬಂಧಪಟ್ಟ ಘಟಕಗಳಿಗೆ ಘಟಕವಾರು ಆಯ್ಕೆ ಪಟ್ಟಿಗಳನ್ನು ಕಳುಹಿಸಲಾಗಿರುತ್ತದೆ. ನಂತರ ಅರ್ಹ ಅಭ್ಯರ್ಥಿಗಳಿಗೆ ಭಾಗಶ: ಅಂತಿಮ ಆಯ್ಕೆ ಪಟ್ಟಿಗಳನ್ನು ತಯಾರಿಸಿ ಘಟಕಗಳಿಗೆ ಕಳುಹಿಸಲಾಗಿರುತ್ತದೆ.
- ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್)-26 ಹುದ್ದೆಗಳ ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ನಡೆಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.
- ವಿಶೇಷ ಆರ್‌ಎಸ್‌ಐ (ಕೆಎಸ್‌ಆರ್‌ಪಿ)-40 ಮತ್ತು ಸಬ್-ಇನ್ಸ್‌ಪೆಕ್ಟರ್ (ಕೆಎಸ್‌ಐಎಸ್‌ಎಫ್)-51 ಹುದ್ದೆಗಳ ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ನಡೆಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿ: 03.03.2021 ರಂದು ಪ್ರಕಟಿಸಲಾಗಿರುತ್ತದೆ.
- ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)-545 ಹುದ್ದೆಗಳಿಗೆ ಅಧಿಸೂಚನೆಯನ್ನು ಪ್ರಕಟಿಸಿ ಅರ್ಹ ಅಭ್ಯರ್ಥಿಗಳಿಂದ ದಿ: 22.01.2021 ರಿಂದ 22.02.2021 ರವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.
- ಪಿಎಸ್‌ಐ (ಸಿವಿಲ್)-402 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿ ದಿ: 01.04.2021 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.
- ವೈಜ್ಞಾನಿಕ ಅಧಿಕಾರಿ - 54 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ದಾಖಲೆಗಳ ಪರಿಶೀಲನೆ ಸಲುವಾಗಿ ಸಂಬಂಧಪಟ್ಟ ಘಟಕಕ್ಕೆ ರವಾನಿಸಲಾಗಿರುತ್ತದೆ.
- ವೈಜ್ಞಾನಿಕ ಅಧಿಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದ-85 ಹುದ್ದೆಗಳಿಗೆ ಅಧಿಸೂಚನೆಯನ್ನು ತಯಾರಿಸಿ ಅರ್ಜಿಗಳನ್ನು ದಿ: 07.06.2021 ರಿಂದ ಆಹ್ವಾನಿಸಲಾಗಿರುತ್ತದೆ.

### ಪೊಲೀಸ್ ಕಾನ್‌ಸ್ಟೇಬಲ್ / ಪ್ರಯೋಗಾಲಯ ಸಹಾಯಕರು ಮತ್ತು ಇತರೆ

- ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್-1005 ಹುದ್ದೆಗಳಿಗೆ ನಡೆಸಲಾದ ಪಿಎಸ್‌ಟಿ/ಪಿಇಟಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳ 1:1 ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಹಾಗೂ ಪರಿಷ್ಕೃತ ಆಯ್ಕೆ ಪಟ್ಟಿಗಳನ್ನು ಸಂಬಂಧಪಟ್ಟ ಘಟಕಗಳಿಗೆ ರವಾನಿಸಲಾಗಿರುತ್ತದೆ.
- ವಿಶೇಷ ಮೀಸಲು ಪೊಲೀಸ್ ಕಾನ್‌ಸ್ಟೇಬಲ್ (ಕೆಎಸ್‌ಆರ್‌ಪಿ & ಐಆರ್‌ಬಿ)-2420 ಹುದ್ದೆಗಳಿಗೆ ನಡೆಸಲಾದ ಪಿಎಸ್‌ಟಿ/ಪಿಇಟಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳ 1:1 ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಹಾಗೂ ಪರಿಷ್ಕೃತ ಆಯ್ಕೆ ಪಟ್ಟಿಗಳನ್ನು ಸಂಬಂಧಪಟ್ಟ ಘಟಕಗಳಿಗೆ ರವಾನಿಸಲಾಗಿರುತ್ತದೆ.
- ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್)-2007 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ವಿವಿಧ ಘಟಕಗಳಿಗೆ ಪರಿಷ್ಕೃತ ಆಯ್ಕೆ ಪಟ್ಟಿಗಳನ್ನು ರವಾನಿಸಲಾಗಿರುತ್ತದೆ.
- ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) (ಪುರುಷ & ಮಹಿಳಾ) (ಎನ್‌ಕೆಕೆ & ಕೆಕೆ) 3533 ಖಾಲಿ ಹುದ್ದೆಗಳ ನೇಮಕಾತಿಗೆ ದಿ: 25.05.2021 ರಂದು ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ.
- ಮೀಸಲು ಪೊಲೀಸ್ ಕಾನ್‌ಸ್ಟೇಬಲ್ (ಬ್ಯಾಂಡ್ಸ್‌ಮೆನ್)252 ಹುದ್ದೆಗಳ ನೇಮಕಾತಿಗಾಗಿ ನಾಲ್ಕು ಘಟಕಗಳ ಅರ್ಹ ಅಭ್ಯರ್ಥಿಗಳಿಗೆ 1:1 ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ನೀಡಲಾಗಿರುತ್ತದೆ.
- ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಗಳಲ್ಲಿನ ಪ್ರಯೋಗಾಲಯ ಸಹಾಯಕರು, ಇಇಜಿ ತಂತ್ರಜ್ಞರು ಮತ್ತು ಪ್ರಯೋಗಾಲಯ ಸೇವಕರ 54 ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ದಿ: 03.04.2021 ರಂದು ಪ್ರಕಟಿಸಿ ಸಂಬಂಧಪಟ್ಟ ಘಟಕಕ್ಕೆ ಕಳುಹಿಸಲಾಗಿದೆ.



## ವಿದೇಶಿ ರಾಯಭಾರಿಗಳೊಂದಿಗೆ ಸಭೆ

ದಿನಾಂಕ 19.03.2021 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜರ್ಮನ್ ವಿದೇಶಿ ರಾಯಭಾರಿಗಳೊಂದಿಗೆ **" ಅಪರಾಧ ನಿಗ್ರಹಕ್ಕೆ ತಂತ್ರಜ್ಞಾನ ಬಳಕೆ "** ಕುರಿತು ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಇವರು ಸಭೆಯಲ್ಲಿ ಚರ್ಚಿಸಿರುತ್ತಾರೆ.

## ಭಾರತೀಯ ಮೀಸಲು ಪಡೆ (IRB) ಯ ನೂತನ ಆಡಳಿತ ಕಛೇರಿ:






ಭಾರತೀಯ ಮೀಸಲು ಪಡೆಯ ನೂತನ ಆಡಳಿತ ಕಛೇರಿ ಕಟ್ಟಡವನ್ನು ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಅರಕೇರಿ ಗ್ರಾಮದ 100 ಎಕರೆ ಪ್ರದೇಶದಲ್ಲಿ ಭಾರತ ಸರ್ಕಾರದ ರೂ. 104.97 ಕೋಟಿ ಅನುದಾನದಲ್ಲಿ ನಿರ್ಮಿಸಲಾಗಿದ್ದು, ಇದರ ಉದ್ಘಾಟನೆಯನ್ನು ದಿನಾಂಕ 16–01–2021 ರಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಅಮಿತ್ ಶಾ, ಸನ್ಮಾನ್ಯ ಗೃಹ ಸಚಿವರು, ಭಾರತ ಸರ್ಕಾರ ರವರು ತಮ್ಮ ಅಮೃತ ಹಸ್ತದಿಂದ ವರ್ಚುವಲ್ ಉದ್ಘಾಟನೆಯನ್ನು ನೆರವೇರಿಸಿರುತ್ತಾರೆ.

## ನಿವೃತ್ತ ಡಿ.ಜಿ.ಪಿ ರವರಿಗೆ ಬೀಳ್ಕೊಡುಗೆ



ಶ್ರೀ ಪಿ.ಕೆ.ಗರ್ಗ್
ಪೊಲೀಸ್ ಮಹಾನಿರ್ದೇಶಕರು

ಶ್ರೀ ಪಿ.ಕೆ.ಗರ್ಗ್, ಐಪಿಎಸ್, ರವರು ದಿನಾಂಕ 01–06–1989ರಲ್ಲಿ ಹಾವೇರಿ ಉಪವಿಭಾಗದ ಎ.ಎಸ್.ಪಿ ಯಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿ, ಎಸ್.ಪಿ ಆಗಿ ಮುಂಬಡ್ತಿ ಹೊಂದಿ ಬೀದರ್, ಮಂಡ್ಯ, ಕೊಪ್ಪಳ ಜಿಲ್ಲೆ, ರಾಜ್ಯಗುಪ್ತ ವಾರ್ತೆ, 4 ಮತ್ತು 9ನೇ ಪಡೆಯ ಕಮಾಂಡೆಂಟ್ ಮತ್ತು ಎಐಜಿಪಿ ಅಪರಾಧ ಆಗಿ ಸೇವೆ ಸಲ್ಲಿಸಿರುತ್ತಾರೆ, 2000ನೇ ಸಾಲಿನಲ್ಲಿ ಡಿಐಜಿಪಿ ಆಗಿ ಮುಂಬಡ್ತಿ ಹೊಂದಿ ಕೆ.ಎಸ್.ಆರ್.ಟಿ.ಸಿ, ಕೆ.ಪಿ.ಎ, ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. 2004ನೇ ಸಾಲಿನಲ್ಲಿ ಐಜಿಪಿ ಆಗಿ ಮುಂಬಡ್ತಿ ಹೊಂದಿ ಸಿ.ಎಸ್.ಪಿ ಉಡುಪಿ, ಮೈಸೂರು ಶುಗರ್ ಕಂಪನಿ, ಬಿ.ಎಂ.ಟಿ.ಸಿ ಮತ್ತು ಕೆ.ಪಿ.ಟಿ.ಸಿ.ಎಲ್ ನಲ್ಲಿ ಸೇವೆ ಸಲ್ಲಿಸಿರುತ್ತಾರೆ ಹಾಗೂ 2011ನೇ ಸಾಲಿನಲ್ಲಿ ಎಡಿಜಿಪಿ ಆಗಿ ಮುಂಬಡ್ತಿ ಹೊಂದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್, ಆರ್ಥಿಕ ಅಪರಾಧಗಳು, ಅಪರಾಧ ಮತ್ತು ತಾಂತ್ರಿಕ ಸೇವೆಗಳು ಮತ್ತು ಪೊಲೀಸ್ ಗೃಹ ನಿರ್ಮಾಣ ನಿಗಮ ಹಾಗೂ ಒಳಾಡಳಿತ ಇಲಾಖೆಯಲ್ಲಿ ಮತ್ತು 2018ನೇ ಸಾಲಿನಲ್ಲಿ ಡಿಜಿಪಿಯಾಗಿ ಮುಂಬಡ್ತಿ ಹೊಂದಿ ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ವಿಭಾಗದಲ್ಲಿ ಕಾರ್ಯನಿರ್ವಹಿಸಿರುತ್ತಾರೆ.

ಸದರಿ ಅಧಿಕಾರಿಯವರು ಇಲಾಖೆಯಲ್ಲಿ ಸಲ್ಲಿಸಿದ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ 2003 ಹಾಗೂ 2011 ನೇ ಸಾಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು **"ಪೊಲೀಸ್ ಶ್ಲಾಘನೀಯ ಸೇವಾ ಪದಕ"** ಹಾಗೂ ಸನ್ಮಾನ್ಯ **"ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ"** ಗಳನ್ನು ನೀಡಿ ಗೌರವಿಸಲಾಗಿರುತ್ತದೆ.

ಸದರಿ ಅಧಿಕಾರಿಯವರು ಇಲಾಖೆಯಲ್ಲಿ 35 ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ ದಿನಾಂಕ 30–04–2021ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. ಇವರ ಮುಂದಿನ ಜೀವನ ಸುಖಕರವಾಗಿರಲೆಂದು ಹಾರೈಸುತ್ತೇವೆ.

ಪರಿಕಲ್ಪನೆ:

**ಡಾ॥ ಎಂ. ಎ. ಸಲೀಂ,** ಐ.ಪಿ.ಎಸ್.
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ಆಡಳಿತ, ಬೆಂಗಳೂರು.





**ಶ್ರೀ ಕೆ.ವಿ. ಶರತ್ ಚಂದ್ರ,** ಐ.ಪಿ.ಎಸ್.
ಆರಕ್ಷಕ ಮಹಾನಿರೀಕ್ಷಕರು,
ಸಿಐಡಿ, ಅರಣ್ಯ ಘಟಕ, ಬೆಂಗಳೂರು.